(ii) the third list of un-starred questions and answers of the third Session.

SECOND LIST & OF SECOND SESSION, 1972

UNSTARRED QUSETION AND ANSWERS

ವರದಾನದಿಗೆ ಕೌಂಡ್ಲೆ ಹತ್ತಿರ ಅಣೆಕಟ್ಟು ಕಟ್ಟುವ ಯೋಜನೆ

೪೩. (ಲ):— ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ (ಶಿಕಾರಿ).— ಮಾನ್ಯ ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ. —

(ಅ) ಸಾಗರ ತಾಲ್ಲೂಕು ಕೌಂಡ್ಲೆ ಹತ್ತಿರ ಪ್ರವಾಹ ನಿಯಂತ್ರಣ ಕ್ರಮವಾಗಿ ವರದಾನದಿಗೆ ಆಡ್ಡಕಟ್ಟೆ ಕಟ್ಟುವ ಯೋಜನೆ ಕೇಂದ್ರದ ಮಾಜೂ ರಾತಿಗೆ ರಾಜ್ಯ ಸರಕಾರ ಕಳುಹಿಸಿದ ತಾರೀಖು ಯಾವುದು ;

(ಆ) ಈ ವರದಾನದಿಗೆ ಬನವಾಸಿ ಹತ್ತಿರ ಕಟ್ಟೆಕಟ್ಟುವ ಯೋಜನೆ ಸರ ಕಾರದ ಪರಿಶೀಲನೆಯಲ್ಲಿದೆಯೆ ;

(ಇ) ಹಾಗಾದರೆ ಅದು ಯಾವಾಗ ಕಾರ್ಯಗತವಾಗುತ್ತದೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ (ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು : —

(ಅ) ಕೌಂಡ್ಲೆ ಯೋಜನೆಯು ಇನ್ನೂ ತನಿಖೆಯಲ್ಲಿದೆ.

(ಆ) ಬನವಾಸಿ ಹತ್ತಿರ ವರದಾನದಿಗೆ ಕಟ್ಟೆಕಟ್ಟುವ ಯಾವ ಯೋಜನೆಯೂ ಪರಿಶೀಲನೆಯಲ್ಲಿಲ್ಲ.

(ಇ) (ಅ) ಉತ್ತರದ ಪ್ರಯುಕ್ತ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಭೂಹೀನರಿಗೆ ಭೂಮಿಯನ್ನು ಹಂಚುವುದು.

೪೪. (೨೨) ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್ (ಶಿಕಾರಿ) .... ಕಂದಾಯ ಮಂತ್ರಿಗಳು ದಯೆಯಿಟ್ಟು ಈ ವಿಷಯಗಳನ್ನು ತಿಳಿಸುವರೇ :—

(ಶ್ರಿ ಎಂ ಎಚ್. ಜಯಪ್ರಕಾಶನಾರಾಯಣ್)

(ಅ) ಮೈಸೂರು ರಾಜ್ಯದಲ್ಲಿ ಕಳೆದ ಹತ್ತು ವರ್ಷಗಳಿಂದ ಅಂದರೆ ತಾರೀಖು ೧-೧-೬೨ರಿಂದ ೧೫-೮-೭೨ ರವರೆವಿಗೆ ವಿವಿಧ ತಾಲ್ಲೂಕಿನಲ್ಲಿ ದರಖಾಸ್ತಿನಲ್ಲಿ ಭೂಹೀನ ರೈತ ಕಾರ್ಮಿಕರಿಗೆ ಹಂಚಲಾದ ಜಮೀನಿನ ವಿಸ್ತೀರ್ಣ ಪೆಷ್ಟು ;

(ಆ) ಈ ಬಡ ಭೂಹೀನ ರೈತರು ತಾವು ಪಡೆದ ಭೂಮಿಯನ್ನು ರೂಢಿಸಲು ಹಣವಿಲ್ಲವಾದ ಕಾರಣ ಹಣವಂತರಿಗೆ ಸದರಿ ಜಮೀನನ್ನು ಒತ್ತೆ ಇಟ್ಟು ಅಥವಾ ಕ್ರಯಕ್ಕೆ ಮಾರಿ ಮತ್ತೆ ಭೂಹೀನರಾಗಿರುವರ ಸಂಖ್ಯೆ ಎಷ್ಟು ?

ಈ ರೀತಿ ಕೈತಪ್ಪಿ ಹೋಗಿರುವ ಭೂಮಿಯ ವಿಸ್ತೀರ್ಣವೆಷ್ಟು ;

(ಇ) ಈ ರೀತಿ ಬಡವರ ಜಮೀನು, ಶ್ರೀಮಂತರ ಕೈಸೇರಿ ಪುನಃ ಬಡವರು ಭೂಹೀನರಾಗುವ ಸಮಸ್ಯೆಯನ್ನು ರಾಜ್ಯ ಸರ್ಕಾರ ತಪ್ಪಿಸಲು ಮಾಡಿರುವ ಏರ್ಪಾಡು ಏನು ;

(ಈ) ಈ ರೀತಿ ಬಡಪರ ಜಮೀನು ಹಣವಂತರ ಕೈಸೇರದಂತೆ ಮಾಡಲು ಸರ್ಕಾರವೇ ಅವರಿಗೆ ಸಾಲಕೊಡುವ ವ್ಯವಸ್ಥೆಮಾಡಬೇಕೆಂದು ರಾಜ್ಯ ಸರ್ಕಾರಕ್ಕೆ ಕೇಂದ್ರದಿಂದ ಸಲಹೆ ಬಂದಿದೆಯೆ ;

(ಉ) ಈ ಸಲಹೆಯನ್ನು ಕಾರ್ಯಗತಮಾಡಲು ಸರ್ಕಾರ ಈ ರೀತಿ ಜಮೀನು ಪಡೆದ ಭೂಹೀನವರಿಗೆ ಕೊಟ್ಟ ಸಾಲದ ಮೊಬಲಗೆಷ್ಟು? ಈ ರೀತಿ ಉಳಿಸಿ ಕೊಂಡಿರುವ ಜಮೀನಿನ ವಿಸ್ತೀರ್ಣವೆಷ್ಟು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಮಂತ್ರಿಗಳು) ;—

	ಎಕರೆ	ಗುಂಟೆ
(ಅ)—	೪೪೩೩೬	೨೨$\frac{1}{4}$

(ಆ)	(ಭೂಹೀನ ರೈತರು)	(ಭೂಮಿಯ ವಿಸ್ತೀರ್ಣ)
	೯೦೦೫	೨೦೯೩೦ ಎಕರೆ ೧೫ ಗುಂಟೆಗಳು

(ಇ) ದಕಖಾಸ್ತು ಮೂಲಕ ಪಡೆದಿರುವ ಜಮೀನನ್ನು ದರಖಾಸ್ತುದಾರರು 15 ವರ್ಷಗಳ ಕಾಲ ಯಾರಿಗೂ ಪರಭಾರೆ ಮಾಡಬಾರದೆಂಬ ನಿಯಮವನ್ನು ಕಾನೂನಿನಲ್ಲಿ ಸೇರಿಸಲಾಗಿದೆ ಮತ್ತು ಆ ಪರಿಷತ್ತಿನ ಮೇಲೆ ಸಾಗುವಳಿ ಚೀಟಿಯನ್ನು

ಕೊಡಲಾಗುವುದು ಸದರಿ ನಿಯಮಗಳಿಗೆ ವಿರೋಧವಾಗಿ ನಡೆದರೆ ಕಾನೂನಿನ ಪ್ರಕಾರ ಜಪ್ತೀನು ಮಂಜೂರಾತಿಯನ್ನು ರದ್ದು ಪಡಿಸಲಾಗುತ್ತಿದೆ ಹಾಗೂ ಆ ಜಪ್ತೀನುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗುತ್ತಿದೆ. ರೆವಿನ್ಯೂ ಅಧಿಕಾರಿಗಳನ್ನು ಗ್ರಾಮಾಧಿಕಾರಿಗಳನ್ನು ಎಚ್ಚರಿಕೆಯಿಂದ ಪರಭಾರೆ ಮಾಡುವುದನ್ನು ನೋಡಿಕೊಳ್ಳಬೇಕೆಂದು ಆದೇಶ ಕೊಡಲಾಗಿದೆ. ಪ್ರತಿಗ್ರಾಮಗಳಲ್ಲಿ ಪಟ್ಟಿಯನ್ನು ಇಟ್ಟುಕೊಂಡು ತಹಸಿಲ್ದಾರ್ ಮತ್ತು ಅಸಿಸ್ಟೆಂಟ್ ಕಮೀಷನರವರು ಅದನ್ನು ಪ್ರತಿವರ್ಷ ಪರಿಶೀಲಿಸಬೇಕು ಮತ್ತು ಹಾಗೆ ಪರಿಶೀಲಿಸಿದ್ದಕ್ಕೆ ಒಂದು ಸರ್ಟಿಫಿಕೇಟನ್ನು ಕೊಡಬೇಕು.

(ಈ) ಸಹಕಾರ ಸಂಸ್ಥೆಗಳಿಂದ ಮತ್ತು ಷೆಡ್ಯೂಲ್ ಬ್ಯಾಂಕುಗಳಿಂದ ಜಮೀನುಗಳನ್ನು ಆಧಾರ ಮಾಡಿ ಸಾಲ ಪಡೆಯಲು ಅವಕಾಶವಿದೆ ಭೂಅಭಿವೃದ್ಧಿ ಬ್ಯಾಂಕುಗಳು ಭೂಮಿಯನ್ನು ರೂಢಿಸಿದ ನಂತರ ಬರುವ ವರಮಾನವನ್ನು ಗಮನದಲ್ಲಿಟ್ಟುಕೊಂಡು, ಸಾಲಕೊಡಲು ಅನುಕೂಲಿಸುವಂತೆ ನಿಯಮಗಳನ್ನು ಬದಲಾಯಿಸಲಾಗಿದೆ.

(ಉ) ವಿಧಾಗಕ್ಕೆ ಕೊಟ್ಟಿರುವ ಉತ್ತರದ ಹಿನ್ನಲೆಯಲ್ಲಿ ಸರ್ಕಾರವು ಸಾಲ ಕೊಡುವ ಅಗತ್ಯವಿಲ್ಲ.

ROADS FORMED UNDER T. B. P. AREA RAICHUR DISTRICT

45. (32) SRI C. N. PATIL (Lingasugur).—

Will the Minister for Public Works and Electricity pleased to be state.—

(*a*) the total length of roads formed under Tungabhadra Project area in Raichur Disritct in different taluks-Koppal, Gangawathi, Sindhanur, Manvi and Raichur Taluks after S. R. C. and prior to *S*. R. C;

(i) Under Tungabhadra Project

(ii) Under Project funds

(iii) Under Market complex

(iv) (May I know) the reasons for not conmpleting these roads at an early date even though these have been sanctioned long back and there is no shortage of funds;

(*b*) a list of names of such roads be furnished?